ಶ್ರೀ ಪಿ. ಪಿ. ಹೆಗಡೆ.— ವಿದ್ಯುತ್ ಶಕ್ತಿ ಇಲ್ಲದೆ ಇರುವ ಗ್ರಾಮಗಳ ಹೆಸರುಗಳನ್ನು ಕೊಡ ಲಾಗಿದೆ. ಇವಲ್ಲದೆ ವಿದ್ಯುಚ್ಛಕ್ತಿ ಇಲ್ಲದೆ ಇರುವ ಗ್ರಾಮಗಳಲ್ಲಿ ಎಲ್ಲಿ ಕೆಲಸ ಪ್ರಾರಂಭವಾಗಿಲ್ಲ ಆ ಗ್ರಾಮಗಳ ಗತಿ ಏನು ? ಯಾವ ಹಂತದಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಬಹುಶಃ ಅವು ಹಾಮ್ಲೆಟ್ಸ್ ಇರಬಹುದು. ಗ್ರಾಮಗಳ ಹೆಸರುಗಳನ್ನು ಕೊಡುತ್ತೇವೆ, ಹ್ಯಾಮ್ಲೆಟ್ಸ್ ಹೆಸರುಗಳನ್ನು ಕೊಡುವುದಿಲ್ಲ.

ಶ್ರೀ ಪಿ. ಪಿ. ಹೆಗಡೆ.—ಐದನೆ ಗ್ರಾಮಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದಾರೆ. ಇದರ ಕೆಲಸ ಯಾವಾಗ ಪ್ರಾರಂಭ ಮಾಡುತ್ತಾರೆ ಮತ್ತು ಎಷ್ಟು ಕಾಲದೊಳಗೆ ಮುಗಿಯುತ್ತದೆ ? ಉಳಿದ 13 ಗ್ರಾಮಗಳಲ್ಲಿ ಕೆಲಸ ಮುಗಿಯಲು ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಹಳ್ಳಿಗಳ ಕಾರ್ಯಕ್ರಮ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಸೇರಿದೆ ಮತ್ತು ಐದು ವರ್ಷಗಳ ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುತ್ತೇವೆ.

Disparity in Service Conditions of Employees of Government and Panchayats

462. Sri JAYAPRAKASH SHETTY (Brahmavar).—

Will the Minister for Community Development and Social Welfare be pleased to state :—

(*a*) whether there is any disparity in the conditions of service between the State Government employees and Panchayathraj employee. to the disadvantage of the latter ;

(*b*) if so, the steps taken or propose to be taken to remove the same ?

Sri M. MALLIKARJUNA SWAMY (Minister for Community Development and Social Welfare).—

(*a*) and (*b*) The Government employees and Panchayathiraj employees are governed by different sets of rules. The Panchayathiraj Institutions are at liberty to adopt any pay scales to their employees within the maximum stipulated in the Mysore Panchayats and Taluk Boards Employees (Recruitment and Service Conditions of Service) Rules, 1962, subject to their financial position being satisfactory and subject to approval by the competent authority. Thus the pay scales are different even among the Panchayathiraj Institutions. In view of this position the disparity in the conditions of service between the State employees and Panchayathiraj employees may exist and it cannot be helped.

ಶ್ರೀ ಜಯಪ್ರಕಾಶ ಶೆಟ್ಟಿ.—ಸರ್ಕಾರೀ ನೌಕರರಿಗೆ ಮತ್ತು ಪಂಚಾಯಿತಿ ನೌಕರರಿಗೆ ವಿವಿಧ ರೀತಿಯಲ್ಲಿ ಅಸಮಾನತೆ ಮತ್ತು ವ್ಯತ್ಯಾಸವಿದೆ. ಸರ್ಕಾರಿ ನೌಕರರಿಗೆ ನಿಕ್ಕತಕ್ಕ ಪ್ರಾವಿಡೆಂಟ್ ಫಂಡ್, ಪ್ರಮೋಷನ್, ಸರ್ವಿಸ್ಸ್ ಅಬೇಯೆನ್ಸ್ ಸೌಲಭ್ಯಗಳು ಪಂಚಾಯಿತಿ ರಾಜ್ಯ ನೌಕರರಿಗೆ ನಿಕ್ಕುಪಡಿಲ್ಲ. ನಮ್ಮ ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ನೌಕರರು 10 ಸಾವಿರ ಜನರಿದ್ದಾರೆ. ಸರ್ಕಾರಿ ನೌಕರರಿಗೆ ಅನ್ವಯವಾಗುವ ರೀತಿಯಲ್ಲಿ ಪಂಚಾಯಿತಿರಾಜ್ಯ ನೌಕರರಿಗೂ ಮೈಸೂರ್ ಸಿವಿಲ್ ಸರ್ವಿಸ್ ರೂಲ್ಸ್ ಅಪ್ಲೈ ಆಗಬೇಕು ಮತ್ತು ಎಲ್ಲ ಸೌಲಭ್ಯಗಳೂ ಲಭಿಸಬೇಕು ಎಂದು ಕೇಳಿಕೊಳ್ಳುತ್ತೇನೆ.